# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಪಿಎಸ್‌ಸಿ 899 ಆರ್‌ಟಿಬಿ-2/22-23/635

ಲೋಕ ಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು, ದಿನಾಂಕ:20-05-2023.

ಇವರಿಂದ:-

**ಕಾರ್ಯದರ್ಶಿ,**
ಕರ್ನಾಟಕ ಲೋಕಸೇವಾ ಆಯೋಗ,
"ಉದ್ಯೋಗ ಸೌಧ",
ಬೆಂಗಳೂರು-560001.

ಇವರಿಗೆ:-

**ಮುಖ್ಯ ಇಂಜಿನಿಯರ್,**
ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ,
ಆನಂದರಾವ್ ಸರ್ಕಲ್,
ಬೆಂಗಳೂರು-560009.

ಮಾನ್ಯರೆ,

**ವಿಷಯ:** ಜಲ ಸಂಪನ್ಮೂಲ ಇಲಾಖೆಯಲ್ಲಿ ಖಾಲಿ ಇರುವ ಕಿರಿಯ ಇಂಜಿನಿಯರ್ ಹುದ್ದೆಗಳ ನೇಮಕಾತಿ ಬಗ್ಗೆ.

**ಉಲ್ಲೇಖ:** 1.ತಮ್ಮ ಪತ್ರ ಸಂಖ್ಯೆ: ಜಸಂಇ/109/ಇಎಸ್‌ಓ/ಕಿಇನೇ/2022, ದಿ:27-02-2023.
2.ಸರ್ಕಾರದ ತಿದ್ದುಪಡಿ ಸಂಖ್ಯೆ: ಜಸಂಇ 170 ಸೇಎಸು 2017, ದಿ:06-07-2022.
3.ಆಯೋಗದ ಪತ್ರ ಸಂ: ಪಿಎಸ್‌ಸಿ 899 ಆರ್‌ಟಿಬಿ-2/22-23/4056, ದಿ:06-03-2023.
4.ಸರ್ಕಾರದ ಆದೇಶ ಸಂ: ಸಿಆಸುಇ 02 ಸೇಹಿಮ 2023, ದಿ:08-03-2023
5.ಸರ್ಕಾರದ ಆದೇಶ ಸಂ: ಹಿಂವಕ 135 ಬಿಸಿಎ 2023, ದಿ:27-03-2023

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಇಲಾಖೆಯಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದದ ಕಿರಿಯ ಇಂಜಿನಿಯರ್ (ಸಿವಿಲ್) 270 ಹಾಗೂ ಕಿರಿಯ ಇಂಜಿನಿಯರ್ (ಮೆಕಾನಿಕಲ್) 30 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವಂತೆ ಕೋರಿ ಉಲ್ಲೇಖ(01)ರ ಪತ್ರದೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತೀರಿ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಕಿರಿಯ ಇಂಜಿನಿಯರ್ (ಸಿವಿಲ್) ಹಾಗೂ ಕಿರಿಯ ಇಂಜಿನಿಯರ್ (ಮೆಕಾನಿಕಲ್) ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಕುರಿತು ಮಾಹಿತಿ ಕೋರಿ ಆಯೋಗದ ದಿ:06-03-2023ರ ಪತ್ರದೊಂದಿಗೆ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿತ್ತು.

ಸದರಿ ಮಾಹಿತಿಯೊಂದಿಗೆ ಸರ್ಕಾರವು ಉಲ್ಲೇಖ(04)ರ ದಿ:08-03-2023ರ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಕಲ್ಪಿಸಿರುವ ವಿವಿಧ ಸಮತಳ ಮೀಸಲಾತಿಗಳನ್ನು ಅನುಷ್ಠಾನಗೊಳಿಸಲು ರೋಸ್ಟರನ್ನು ನಿಗದಿಪಡಿಸುವ ಬಗ್ಗೆ ಹಾಗೂ ಉಲ್ಲೇಖ(05)ರ ದಿ:27-03-2023ರ ಆದೇಶದಲ್ಲಿ ರಾಜ್ಯದ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಕಲ್ಪಿಸಿರುವ ಮೀಸಲಾತಿಯನ್ನು ಪುನರ್ ವರ್ಗೀಕರಿಸಿ ಮೀಸಲಾತಿ ಪಟ್ಟಿಯನ್ನು ಜಾರಿಗೊಳಿಸಲಾಗಿರುವುದರಿಂದ ಸರ್ಕಾರವು ಜಾರಿಗೊಳಿಸಿರುವ ಉಲ್ಲೇಖ (04) ಮತ್ತು (05) ರಲ್ಲಿನ ಆದೇಶ್ವದನ್ವಯ ಪರಿಶೀಲಿಸಿ ದೃಢೀಕೃತ ನಮೂನೆ-06 ರೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

**(ಸುರಳ್ಕರ್ ವಿಕಾಸ್ ಕಿಶೋರ್)**
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.